ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	ಶ್ರೀ ಸುನೀಲ್ ವಲ್ಯಾಪುರೆ (ವಿಧಾನ ಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	255
ಉತ್ತರಿಸಬೇಕಾದ ದಿನಾಂಕ	02.02.2021
ಉತ್ತರಿಸಬೇಕಾದವರು	ನಗರಾಭಿವೃದ್ಧಿ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ.	ಕಳೆದ 03 ವರ್ಷಗಳಿಂದ ಕಲಬುರಗಿ ಜಿಲ್ಲೆಯಲ್ಲಿ ಎಷ್ಟು ಲೇಔಟ್‌ಗಳಿಗೆ ಅನುಮತಿ ನೀಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಕಲಬುರ್ಗಿ ಜಿಲ್ಲೆಯಲ್ಲಿ ಒಟ್ಟು 562 ವಿನ್ಯಾಸಗಳಿಗೆ ಅನುಮೋದನೆ ನೀಡಲಾಗಿದೆ. (ತಾಲ್ಲೂಕುವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ).
ಆ.	ನಿಗಧಿತ ಅವಧಿಯಲ್ಲಿ ಲೇಔಟ್ ಅಭಿವೃದ್ಧಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಲೇಔಟ್ ಅಭಿವೃದ್ಧಿ ಮಾಡಿರುವ ಲೇಔಟ್‌ಗಳ ಸಂಖ್ಯೆ ಎಷ್ಟು; ಮತ್ತು ಅಭಿವೃದ್ಧಿ ಮಾಡದಿರುವ ಲೇಔಟ್‌ಗಳ ವಿರುದ್ಧ ಕೈಗೊಂಡ ಕ್ರಮಗಳೇನು; (ತಾಲ್ಲೂಕುವಾರು ವಿವರ ನೀಡುವುದು)	ಸರ್ಕಾರದ ಗಮನಕ್ಕೆ ಬಂದಿದೆ. ಅಭಿವೃದ್ಧಿ ಪಡಿಸಿದ ಬಡಾವಣೆಗಳ ವಿವರ ಈ ಕೆಳಕಂಡಂತಿದೆ.

ಪ್ರಾಧಿಕಾರದ ವಿವರ	ಅಭಿವೃದ್ಧಿ ಮಾಡಿರುವ ಬಡಾವಣೆಗಳ ಸಂಖ್ಯೆ
ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ	95
ಚಿತ್ತಾಪೂರ ನಗರ ಯೋಜನಾ ಪ್ರಾಧಿಕಾರ	2
ಸೇಡಂ ನಗರ ಯೋಜನಾ ಪ್ರಾಧಿಕಾರ	4
ನಗರಸಭೆ ಶಹಾಬಾದ	2
ಪುರಸಭೆ ಅಫಜಲ್ ಪುರ	–
ಪುರಸಭೆ ಆಳಂದ	–
ಪುರಸಭೆ ಚಿಂಚೋಳಿ	–
ಪುರಸಭೆ ಜೇವರ್ಗಿ	1
ಪುರಸಭೆ ಸೇಡಂ	21
ಪುರಸಭೆ ವಾಡಿ	–
ಪಟ್ಟಣ ಪಂಚಾಯತ್ ಕಾಳಗಿ	–

ಉಳಿದ ವಿನ್ಯಾಸಗಳಲ್ಲಿ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಹಾಗೂ ಅಭಿವೃದ್ಧಿ ಮಾಡದಿರುವ ಲೇಔಟ್‌ಗಳ ಮಾಲೀಕರಿಗೆ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಂದ ನೋಟೀಸ್ ನೀಡಲಾಗಿರುತ್ತದೆ.

<table>
<tr>
<td>ಇ.</td>
<td>ಕಲಬುರಗಿ ಜಿಲ್ಲೆಯಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿರುವ ಲೇಔಟ್‌ಗಳ ಸಂಖ್ಯೆ. ಎಷ್ಟು; ಮತ್ತು ಸದರಿಯವರ ವಿರುದ್ಧ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)</td>
<td>ಕಲಬುರಗಿ ಜಿಲ್ಲೆಯಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿರುವ ಲೇಔಟ್‌ಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಪ್ರಾಧಿಕಾರದ ವಿವರ</th><th>ಅನಧಿಕೃತ ಬಡಾವಣೆಗಳ ಸಂಖ್ಯೆ</th></tr>
<tr><td>ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ</td><td>49</td></tr>
<tr><td>ಚಿತ್ತಾಪೂರ ನಗರ ಯೋಜನಾ ಪ್ರಾಧಿಕಾರ</td><td>–</td></tr>
<tr><td>ಸೇಡಂ ನಗರ ಯೋಜನಾ ಪ್ರಾಧಿಕಾರ</td><td>–</td></tr>
<tr><td>ವಾಡಿ–ಶಹಾಬಾದ ನಗರ ಯೋಜನಾ ಪ್ರಾಧಿಕಾರ</td><td>4</td></tr>
<tr><td>ನಗರಸಭೆ ಶಹಾಬಾದ</td><td>5</td></tr>
<tr><td>ಪುರಸಭೆ ಅಫಜಲ್ ಪುರ</td><td>53</td></tr>
<tr><td>ಪುರಸಭೆ ಆಳಂದ</td><td>57</td></tr>
<tr><td>ಪುರಸಭೆ ಚಿಂಚೋಳಿ</td><td>59</td></tr>
<tr><td>ಪುರಸಭೆ ಜೇವರ್ಗಿ</td><td>86</td></tr>
<tr><td>ಪುರಸಭೆ ಸೇಡಂ</td><td>62</td></tr>
<tr><td>ಪುರಸಭೆ ವಾಡಿ</td><td>6</td></tr>
<tr><td>ಪಟ್ಟಣ ಪಂಚಾಯತ್ ಕಾಳಗಿ</td><td>–</td></tr>
</table>
ನಗರ ಸ್ಥಳೀಯ ಯೋಜನಾ ಪ್ರದೇಶಗಳು/ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಅನಧಿಕೃತ ಬೆಳವಣಿಗೆಗಳನ್ನು ತಡೆಗಟ್ಟುವ ಕುರಿತು ಈಗಾಗಲೇ ಸರ್ಕಾರದಿಂದ ಸುತ್ತೋಲೆಗಳನ್ನು ಹೊರಡಿಸಲಾಗಿದ್ದು, ಯಾವುದೇ ಅನಧಿಕೃತ ಬೆಳವಣಿಗೆ ಕಂಡು ಬಂದಲ್ಲಿ ಸಂಬಂಧಿಸಿದ ಆಯುಕ್ತರು/ ಸದಸ್ಯ ಕಾರ್ಯದರ್ಶಿಗಳು/ ಪೌರಾಯುಕ್ತರು/ ಮುಖ್ಯಾಧಿಕಾರಿಗಳನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಿ ಶಿಸ್ತಿನ ಕ್ರಮ ಜರುಗಿಸಲಾಗುವುದೆಂದು ಸೂಚಿಸಲಾಗಿದೆ.</td>
</tr>
</table>

ಸಂಖ್ಯೆ: ನಅಇ 14 ಗುಅಪ್ರಾ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು

ಅನುಬಂಧ-

ಕಳೆದ ಮೂರು ವರ್ಷಗಳಲ್ಲಿ ಕಲಬುರ್ಗಿ ಜಿಲ್ಲೆಯಲ್ಲಿ ಒಟ್ಟು 562 ವಿನ್ಯಾಸಗಳಿಗೆ ಅನುಮೋದನೆ ನೀಡಲಾಗಿದೆ. ವಿವರಗಳು ಈ ಕೆಳಕಂಡಂತಿದೆ.

ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ	
ತಾಲ್ಲೂಕು	ವಿನ್ಯಾಸ ಅನುಮೋದನೆ ನೀಡಲಾದ ಒಟ್ಟು ಪ್ರಕರಣಗಳು
ಅಫಜಲ್ ಪುರ	37
ಆಳಂದ	10
ಚಿಂಚೋಳಿ	22
ಚಿತ್ತಾಪೂರ	39
ಜೇವರ್ಗಿ	44
ಕಲಬುರಗಿ	49
ಸೇಡಂ	8
ಒಟ್ಟು (A)	**209**
ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ	194
ನಗರ ಯೋಜನಾ ಪ್ರಾಧಿಕಾರ, ಚಿತ್ತಾಪೂರ	16
ನಗರ ಯೋಜನಾ ಪ್ರಾಧಿಕಾರ, ಸೇಡಂ	13
ನಗರ ಯೋಜನಾ ಪ್ರಾಧಿಕಾರ, ವಾಡಿ–ಶಹಾಬಾದ	30
ಒಟ್ಟು (B)	**253**
ನಗರಸಭೆ ಶಹಾಬಾದ	3
ಪುರಸಭೆ ಅಫಜಲ್ ಪುರ	23
ಪುರಸಭೆ ಆಳಂದ	8
ಪುರಸಭೆ ಚಿಂಚೋಳಿ	9
ಪುರಸಭೆ ಜೇವರ್ಗಿ	14
ಪುರಸಭೆ ಸೇಡಂ	30
ಪುರಸಭೆ ವಾಡಿ	5
ಪಟ್ಟಣ ಪಂಚಾಯತ್ ಕಾಳಗಿ	8
ಒಟ್ಟು (C)	**100**
ಒಟ್ಟು (A+B+C)	**562**